† ಶ್ರೀ ಬಸವರಾಜು (ಬ್ರಹ್ಮಾವರ).—ಸನ್ಮಾನ್ಯ ಅಧ್ಯಕ್ಷರೇ, ಯಾವುದೇ ಮಸೂದೆಯನ್ನು ತರುವಾಗ ಸಂಬಂಧಪಟ್ಟ ಎಲ್ಲ ವರ್ಗಗಳ ಹಿತರಕ್ಷಣೆ ಮಾಡುವಂತಿರಬೇಕು. ಆದರೆ ಮಾನ್ಯ ಮಿನಿಸ್ಟರ್‌ರವರು ಸದನದಲ್ಲಿ ಮಂಡಿಸಿರುವ ಈ ಮಸೂದೆಯಿಂದ ಎಲ್ಲಾ ವರ್ಗದ ಜನರ ಹಿತರಕ್ಷಣೆ ಆಗುವುದಿಲ್ಲ ಎನ್ನುವ ದೃಷ್ಟಿಯಿಂದ ಇದನ್ನು ವಾಪಾಸ್ಸು ಪಡೆಯಬೇಕೆಂದು ನಾನು ತಮ್ಮ ಮೂಲಕ ಅವರನ್ನು ಒತ್ತಾಯಿಸುತ್ತೇನೆ. ಈ ಮೀನುಗಾರಿಕೆಯಲ್ಲಿ ಎರಡು ವಿಧ ಇದೆ. ಸಂಪ್ರದಾಯಿಕ ಮೀನುಗಾರಿಕೆ ಮತ್ತು ಯಾಂತ್ರೀಕೃತ ಮೀನುಗಾರಿಕೆ ಸಾಂಪ್ರದಾಯಿಕ ಮೀನುಗಾರರು ಮಾರಿಬಲೆ ರಂಪಣಿ, ನಾಡ ದೋಣಿಗಳ ಮೂಲಕ ಸಮುದ್ರದಲ್ಲಿರುವ ಮೀನುಗಳನ್ನು ಹಿಡಿಯುತ್ತಾರೆ ಆದರೆ ಈ ಮಸೂದೆಯಲ್ಲಿ ಇದು ಯಾವುದೇ ವಿಷಯ ಪ್ರಸ್ತಾಪ ಇಲ್ಲದಿರುವುದು ಕಂಡುಬರುತ್ತದೆ. ಈ ಮಸೂದೆ ಮೀನುಗಾರಿಕೆ ಬಂದರಿನ ಹಿನ್ನಲೆಯಿಟ್ಟುಕೊಂಡು ಮಾಡಿದ ಹಾಗೆ ತೋರಿಬರುತ್ತದೆ. ಈ ಕಡಲು ಮೀನುಗಾರಿಕೆಯ ಜೊತೆಗೆ ಹಿನ್ನೀರು ಮೀನುಗಾರಿಕೆ ಇದೆ. ಹಿನ್ನೀರಿನಲ್ಲಿ ಮೀನು ಮರಿಗಳನ್ನು ಉತ್ಪಾದನೆ ಮಾಡಲಿಕ್ಕೆ ಜಾಗ ಬೇಕಾಗುತ್ತದೆ. ಅದನ್ನು ಲೀಸ್‌ನಲ್ಲಿ ಕೊಡತಕ್ಕಂಥ ಕಾನೂನನ್ನು ಇದು ಒಳಗೊಂಡಿದ್ದರೆ ಸಹಾಯಕವಾಗುತ್ತದೆ. ಏಕೆಂದರೆ, ಆ ಜಾಗಗಳಲ್ಲಿ ಲೀಸ್ ಬೇಕಾದರೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕಾಗುತ್ತದೆ. ಅಲ್ಲಿಂದ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕಾಗುತ್ತದೆ. ಅಲ್ಲಿಂದ ಮೀನುಗಾರಿಕೆ ಇಲಾಖೆಗೆ ಎಂದು ಸುತ್ತಾಡಬೇಕಾಗುತ್ತದೆ. ಇದರಿಂದಾಗಿ ಈ ಮೀನುಗಾರಿಕೆಯನ್ನು ಉತ್ತಮವಾಗಿ ಕೈಗೊಳ್ಳುವುದಕ್ಕೆ ಕಷ್ಟವಾಗುತ್ತದೆ. ಈ ಉದ್ದೇಶದಿಂದ ಇದು ಸಹ ಮಸೂದೆಯಲ್ಲಿ ಒಳಗೊಂಡಿರಬೇಕಾಗಿತ್ತೆಂದು ಹೇಳುತ್ತೇನೆ.

೩-೩೦ ಪಿ. ಎಂ.

ಈ ವಿಧೇಯಕ ಶಿನೇ ಐಟಂನಲ್ಲಿ ಮೀನು ಹಿಡಿಯುವ ನೌಕೆಗಳಿಗೆ ಲೈಸೆನ್ಸ್ ನೀಡಿಕೆ ಬಗ್ಗೆ ಸೇಳಿದ್ದೀರಿ ಮತ್ತು ಏನೇ ಐಟಂನಲ್ಲಿ ನೌಕೆಗಳ ನೋಂದಣಿ ಬಗ್ಗೆ ಹೇಳಿದ್ದೀರಿ. ಈ ಎರಡರ ಅಗತ್ಯವಿಲ್ಲ. ಯಾವುದಾದರೂ ಒಂದನ್ನು ಮಾಡುವುದು ಸೂಕ್ತವೆಂದು ಕಾಣುತ್ತದೆ. ಈ ವಿಧೇಯಕವನ್ನು ಇಲ್ಲಿ ಪಾಸ್ ಮಾಡುವುದಕ್ಕೆ ಮೊದಲು ಮೀನುಗಾರರ ಪ್ರತಿನಿಧಿಗಳ ಜೊತೆ ಮಾತುಕತೆ ನಡೆಸುವುದು ಒಳ್ಳೆಯದು ಈ ಬಗ್ಗೆ ಹೆಚ್ಚು ತಿಳಿದ ಹಿರಿಯರ ಜೊತೆಯಲ್ಲಿ ವಿಚಾರವಿನಿಮಯ ಮಾಡಿ ನಂತರ ಈ ಮಸೂದೆಯನ್ನು ಇಲ್ಲಿ ಪಂಡನೆ ಮಾಡಬೇಕೆಂದು ಹೇಳುತ್ತೇನೆ. ಈಗ ಇದನ್ನು ಇದ್ದಕ್ಕಿದ್ದಂತೆ ತಂದಿರುವುದರಿಂದ ಇದರಲ್ಲಿ ಏನೇನಂ ಅಡಕವಾಗಿದೆ ಎಂಬುದು ನಮ್ಮ ಮೀನುಗಾರರಿಗೆ ತಿಳಿಯುವುದಿಲ್ಲ ನಮ್ಮ ಕರಾವಳಿಯ ಜನರು ಇದನ್ನು ಭೂತ ಕಂಡಂತೆ ಕಾಣುತ್ತಾರೆ. ಆದ್ದರಿಂದ ಈ ಬಗ್ಗೆ ಅವರಲ್ಲಿ ರುವಂತಹ ಸಂಶಯಗಳನ್ನು ಮೊದಲು ನಿವಾರಿಸಬೇಕು. ಮುಖ್ಯವಾಗಿ ಇದನ್ನು ನೀವು ಪತ್ರಿಕೆಯ ಪುನರ್ವಿಮರ್ಶೆ ಮಾಡಬೇಕು, ಆದರ ನಂತರ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಕಳುಹಿಸಿ ಕೊಡಬೇಕು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡಿ ನನ್ನ ಎರಡು ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ಎನ್. ನಾಯಕ್ (ಭಟ್ಕಳ್).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕಡಲು ಮೀನುಗಾರಿಕಾ ವಿಧೇಯಕವನ್ನು ಮಾನ್ಯ ಮಂತ್ರಿಗಳು ಸಭೆಯ ಮುಂದೆ ಏನು ಮಂಡಿಸಿದ್ದಾರೆ, ಅದನ್ನು ವಿರೋಧಿಸುತ್ತಾ ಈ ಬಗ್ಗೆ ನಾಲ್ಕು ಸೂಚನೆಗಳನ್ನು ಕೊಡುತ್ತೇನೆ ಸರ್ಕಾರದವರು ಯಾವುದೇ ಒಂದು ಕಾನೂನು ತರಬೇಕಾದರೆ, ಆ ಕಾನೂನಿಂದ ಲಾಭ ಪಡೆಯುವಂತಹ ವ್ಯಕ್ತಿಗಳ ಜೊತೆಯಲ್ಲಿ ಮಾತುಕತೆ ನಡೆಸಬೇಕಾಗುತ್ತದೆ. ಜನತೆಗೆ ಏನಾದರೂ ಒಂದು ರೀತಿಯಿಂದ ಅನುಕೂಲ ಮಾಡಿಕೊಟ್ಟಿದ್ದರೆ ಇಂತಹ ವಿಧೇಯಕವನ್ನು ತರಬೇಕೇ ಹೊರತು, ಜನರಿಗೆ ತೊಂದರೆ ಕೊಡಲು ತರಬಾರದು ಈಗ ಉದಾಹರಣೆಗೆ ಹೇಳಬೇಕೆಂದರೆ ಮೋಟಾರ್ ವೆಹಿಕಲ್ಸ್ ಆಕ್ಟ್ ಎಂದು ಇದೆ. ಮೋಟಾರ್‌ಗಳನ್ನು ಓಡಿಸುವವರಿಗೆ ಸರ್ಕಾರದವರು ರಸ್ತೆ ಮುಂತಾದ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದರಿಂದ, ಇದಕ್ಕೆ ಸಂಬಂಧ ಪಟ್ಟಂತೆ ಕಾನೂನನ್ನು ಜಾರಿಗೆ ತರುವ ಅಧಿಕಾರ ಸರ್ಕಾರಕ್ಕೆ ಇದೆ. ಅದೇ ರೀತಿ ಈಗ ಫಾರೆಸ್ಟ್ ಆಕ್ಟ್ ಎಂದು ಇದೆ. ಸರ್ಕಾರದವರು ಗಿಡಗಳನ್ನು ನೆಟ್ಟು ಬೆಳೆಸುತ್ತಾರೆ ಮತ್ತು ಅರಣ್ಯವನ್ನು ರಕ್ಷಣೆ ಮಾಡುತ್ತಾರೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಕಾನೂನುಗಳನ್ನು ತರುವ ಅಧಿಕಾರ ಸರ್ಕಾರಕ್ಕೆ ಇದೆ. ಆದರೆ ಈ ಮೀನುಗಾರಿಕಾ ವಿಧೇಯಕವನ್ನು ತರಲು ಇವರಿಗೆ ಯಾವ ಅಧಿಕಾರ ಇದೆ ? ಏಕೆಂದರೆ, ಹೊಳೆಯನ್ನು ಹರಿಸುವ ಬಗ್ಗೆಯಾಗಲೀ, ಸಮುದ್ರವನ್ನು ಬೆಳೆಸುವ ಬಗ್ಗೆಯಾಗಲೀ ಈ